## ಮೈಸೂರು ಡಿಸ್ಟ್ರಿಕ್ಟು.

ನಂ. 2. ತಾರೀಖು 13ನೇ ಮೇ 1887.

ಚಾಮರಾಜನಗರ ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಇದರ ಕೆಳಗೆ ನಮೂದಿಸಿರುವ ದಸ್ತಾವೇಜನ್ನು ಕ್ರಮವಾದ ವಾರಸ್‌ದಾರ್‌ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲೀ ಈ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡೆಯಬೇಕು, ತಪ್ಪಿದಲ್ಲಿ 1877ನೇ ಇಸವಿ IIIನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರಿಗೆ ನಾಶಮಾಡಲ್ಪಡುತ್ತೆ.

| ನಂಬರ್. | ದಸ್ತಾವೇಜನ್ನು ಬರದುಕೊಟ್ಟವರ ಹೆಸರು ಅಡಿಷನ್ ಸಹ. | ಬರಸಿಕೊಂಡವರ ಹೆಸರು ಅಡಿಷನ್ ಸಹ. | ರಿಜಸ್ಟ್ರಿಗೆ ಹಾಜರಾದ ಸಾಲ್ ವಾಹಿ ತಾರೀಖು. | ರಿಜಿಸ್ಟ್ರಾದ ಸಾಲ್ ವಾಹಿ ತಾರೀಖು. | ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು. |
|---|---|---|---|---|---|
| 71 ——— 1885—86 | ನಾಗವಳ್ಳಿ ಗ್ರಾಮದಲ್ಲಿ ಇರುವ ಶ್ಯಾನುಭೋಗ ಸುಬ್ಬರಾಯರ ಮಗ ಸುಬ್ಬರಾಯ | ನಾಗವಳ್ಳಿ ಗ್ರಾಮದಲ್ಲಿ ಇರುವ ವೊಪಲಿಗರ ಜಾತಿ ಕುಳ್ಳಂಕನಮಗ ಮಾರ | 8—5—85 | 9—5—85 | (30) ರೂಪಾಯಿ ಕಿಮ್ಮತ್ತಿನ ಭೂಮಿ ಶುದ್ಧ ಕ್ರಯ ಪತ್ರ. |

ನಂ. 3. ತಾರೀಖು 18ನೇ ಮೇ 1887.

ಹುಣಸೂರು ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫಿಸಿನಲ್ಲಿ ಇದರ ಕೆಳಗೆ ನಮೂದಿಸಿರುವ ದಸ್ತಾವೇಜನ್ನು ಕ್ರಮವಾದ ವಾರಸ್‌ದಾರ್‌ರಾಗಲೀ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡೆಯಬೇಕು, ತಪ್ಪಿದಲ್ಲಿ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರಿಗೆ ನಾಶ ಮಾಡಲ್ಪಡುತ್ತೆ.

| ನಂಬರ್. | ದಸ್ತಾವೇಜನ್ನು ಬರದು ಕೊಟ್ಟವರ ಹೆಸರು ಮತ್ತು ಅಡಿಷನ್. | ದಸ್ತಾವೇಜನ್ನು ಬರಸಿಕೊಂಡವರ ಹೆಸರು ಮತ್ತು ಅಡಿಷನ್. | ರಿಜಿಸ್ಟ್ರಿಗೆ ಹಾಜರಾದ ತಾರೀಖು. | ರಿಜಿಸ್ಟ್ರಾದ ತಾರೀಖು. | ದಸ್ತಾವೇಜಿನ ಕಿಮ್ಮತ್ತು ಮತ್ತು ಸ್ವಭಾವ. |
|---|---|---|---|---|---|
| 351 ——— 1884—85 | ಹುಣಸೂರು ಕಸಬೇಲಿರುವ ಮುಸಲ್ಮಾನ್ ಜಾತಿ ಮೂಸೆ ಖಾಂಸಾಹೆಬರವರ ಅಮೃತಮಹಲ್ ಇಲಾಖಾ ದರೋಗ ಮಹಮ್ಮದ್ ಗೌಸ್ 1, ಮಹಮ್ಮದ್ ಜರಾಬಿ 1, ಆಷಾಬಿ 1 | ಹುಣಸೂರು ಕಸಬೇಲಿರುವ ಮುಸಲ್ಮಾನರ ಜಾತಿ ಮಹಮ್ಮದ್ ಮದೀನಾಷರೀಫ್ ಸಾಹೇಬರ ಹೆಂಡತಿನೂರಬಿ 1—2ನೇ ಹೆಂಡತಿ ಹುಮ್ಮದ್ ಮುನವರ್ ಪರೀಫ್ ಸಾಹೇಬ 1 | 18—2—85 | 20—2—85 | ಕಿಮ್ಮತ್ತು ಯಿಲ್ಲದ ಸ್ಥಿರಸ್ವತ್ತಿಗೆ ಸಂಬಂಧಪಡುವ ಖುಲಾಸೆ ಪತ್ರ. |

ಟಿ. ಆನಂದರಾವ್,
ರಿಜಿಸ್ಟ್ರಾರ್.

## ಕಡೂರು ಡಿಸ್ಟ್ರಿಕ್ಟು.

ತಾರೀಖು 20ನೇ ಮೇ 1887.

ಕಡೂರು ಡಿಸ್ಟ್ರಿಕ್ಟು ಕೊಪ್ಪ ತಾಲ್ಲೂಕು ಸಬ್ ರಿಜಿಸ್ಟ್ರಾರ್ರ ಆಫೀಸ್‌ನಲ್ಲಿ ಇದರ ಕೆಳಗೆ ನಮೂದಿಸಿರುವ ಬೇವಾರಸ್ ದಸ್ತಾವೇಜುಗಳನ್ನು ಕ್ರಮಪ್ರಕಾರ ವಾರಸ್‌ದಾರ್‌ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡೆಯಬೇಕು, ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುತ್ತೆ.